1987-88ರಿಂದ 1989-90ರ ಅವಧಿಯಲ್ಲಿ ಪ್ರಾರಂಭವಾದ ಘಟಕಗಳ ಪೈಕಿ ಕೆಲಸ ಮಾಡದ ಕೈಗಾರಿಕೆಗಳ ಸಂಖ್ಯೆ ಎಷ್ಟು ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ರಾಜ್ಯಸರ್ಕಾರವು ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕೆ ಈ ಕೆಳಗಿನಂತೆ ಕ್ರಮವಹಿಸುವುದು.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಸಂಬಂಧಪಟ್ಟ ವಾಣಿಜ್ಯ ಬ್ಯಾಂಕುಗಳೊಡನೆ ಘಟಕದ ಪುನಶ್ಚೇತನದ ಬಗ್ಗೆ ಜಂಟೀ ಪರಿಶೀಲನೆ ಜರುಗಿಸುತ್ತದೆ.

ರಾಜ್ಯಸರ್ಕಾರವು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ : ಬ್ಯಾಂಕುಗಳ ಶಿಫಾರಸ್ಸಿನಂತೆ ಪ್ರತಿಯೊಂದು ಘಟಕಕ್ಕೆ ಗರಿಷ್ಠ ಮಿತಿ ರೂ.50,000 ಬೀಜಧನ ಸಾಲ ನೀಡುವುದು.

ಜಟಿಲವಾದ ನಿರ್ದಿಷ್ಟ ಸಮಸ್ಯೆಗಳನ್ನು ರಾಜ್ಯಮಟ್ಟದ ಹಣಕಾಸು ಸಂಸ್ಥೆಗಳ ಸಭೆಯಲ್ಲಿ ಸೂಕ್ತ ಪರಿಹಾರಕ್ಕೆ ಚರ್ಚಿಸಲಾಗುತ್ತದೆ.

ಸರ್ಕಾರವು ನಿರ್ದಿಷ್ಟ ಕೈಗಾರಿಕೆಗಳ ನಿರ್ದಿಷ್ಟ ಜಟಿಲ ಸಮಸ್ಯೆಗಳ ಪರಿಹಾರಕ್ಕೆ ಸಂಬಂಧಪಟ್ಟವರಿಗೆ ತಿಳಿಸುತ್ತದೆ.

ಅಧ್ಯಕ್ಷರು:– ಸಭೆಯ ಮುಂದೆ ಮಂಡಿಸಲಾಯಿತು.

ಸಭೆಯು ಮುಂದಿಡಲಾಗುವ ಕಾಗದಪತ್ರಗಳು :

ಶ್ರೀ ಎಸ್.ಎಂ. ಯಾಹ್ಯ (ಕೈಗಾರಿಕೆ, ವಕ್ಫ್ ಹಾಗೂ ಇಂಧನ ಮಂತ್ರಿ) ಅವರು:- ಕಂಪನಿ ವ್ಯವಹಾರಗಳ ಶಾಸನದ 619 (ಎ) ಕಲಮಿನ ಮೇರೆಗೆ:–

1) 1988-89ನೇ ಸಾಲಿನ ಕರ್ನಾಟಕ ಇಂಪ್ಲಿಮೆಂಟ್ಸ್ ಆಂಡ್ ಮೆಷಿನರೀಸ್ ಕಂಪನಿ ಲಿಮಿಟೆಡ್‌ನ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಟಿಪ್ಪಣಿ ಮತ್ತು ವಾರ್ಷಿಕ ವರದಿ.

2) 1988-89ನೇ ಸಾಲಿನ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಟಿಪ್ಪಣಿ.

3) 1988-89ನೇ ಸಾಲಿನ ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಸ್ಟೀಲ್ ಲಿಮಿಟೆಡ್‌ನ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಟಿಪ್ಪಣಿ.

4) 1988-89ನೇ ಸಾಲಿನ ಕರ್ನಾಟಕ ವಿದ್ಯುತ್ ಕಾರ್ಖಾನೆ ಲಿಮಿಟೆಡ್‌ನ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಟಿಪ್ಪಣಿ.

5) 1986-87ನೇ ಸಾಲಿನ ಮೈಸೂರು ಸಕ್ಕರೆ ಕಾರ್ಖಾನೆ ಲಿಮಿಟೆಡ್‌ನ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಟಿಪ್ಪಣಿಗಳನ್ನು ಸಭೆಯ ಮುಂದೆ ಇಡುತ್ತೇನೆ.

6) ಕಂಪನಿ ವ್ಯವಹಾರಗಳ ಶಾಸನದ 619 (ಎ) (2) ಕಲಮಿನ ಮೇರೆಗೆ :–

1988-89ನೇ ಸಾಲಿನ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಟಿಪ್ಪಣಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು :– ಸಭೆಯ ಮುಂದೆ ಮಂಡಿಸಲಾಯಿತು.

— ಅರ್ಜಿಗಳನ್ನೊಪ್ಪಿಸುವುದು

ಶ್ರೀ ಪಿ. ಬಸವರಾಜ್:– ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಪದ್ಮಶಾಲಿ ಶೆಟ್ಟಿಗಾರ ಜನಾಂಗವನ್ನು ಹಿಂದುಳಿದ ವರ್ಗಕ್ಕೆ ಸೇರಿಸುವ ಬಗ್ಗೆ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.

ಶ್ರೀ ಕೆ. ಕುಶಾಲ:- ಮಾನ್ಯ ಅಧ್ಯಕ್ಷರೇ, ಕರ್ನಾಟಕ ಕ್ಷತ್ರಿಯ ಮರಾಠ ಜನಾಂಗವನ್ನು ಹಿಂದುಳಿದ ಪಂಗಡಕ್ಕೆ ಸೇರಿಸುವ ಬಗ್ಗೆ ಸದನಕ್ಕೆ ಅರ್ಜಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು:- ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.

ಶ್ರೀಮತಿ ಮೋಟಮ್ಮ:- ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಬಗ್ಗೆ ಸದನಕ್ಕೆ ಅರ್ಜಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು:- ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.

ಮುಖ್ಯ ಮಂತ್ರಿಗಳ ವಿರುದ್ಧ ಹಕ್ಕುಚ್ಯುತಿ ನಿರ್ಣಯ

† ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ನಮ್ಮ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 190 ಮತ್ತು 191ರ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ ಹಕ್ಕುಚ್ಯುತಿ ಪ್ರಶ್ನೆಯನ್ನು ತಮ್ಮ ಅವಗಾಹನೆಗಾಗಿ ಕಳುಹಿಸಿದ್ದೇನೆ. ಆ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ನಾನು ತಮ್ಮ ಅನುಮತಿಯನ್ನು ಕೋರುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ, ತಮ್ಮ ಬೇಡಿಕೆಯ ಬಗ್ಗೆ ಉತ್ತರಿಸುತ್ತಾ " ರಾಜ್ಯದಲ್ಲಿ ಹಿಂದಿನ ಜನತಾ ಮತ್ತು ಜನತಾದಳದ ಸದಸ್ಯರು ಅಂದಿನ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ ಆಡಳಿತ ವರ್ಗಾವರ್ಗಿಯನ್ನು ಒಂದು ದೊಡ್ಡ ಇಂಡಸ್ಟ್ರಿ ಮಾಡಿ ಲಕ್ಷಾವಧಿ ರೂಪಾಯಿ ಗಳಿಸಿ ಏನೋ ಒಂದು ರೀತಿಯಲ್ಲಿ ಬೆಳೆದುಕೊಂಡು ಬಂದಂಥ ಅನೇಕ ಜನ ಆವಾಗಿನ ಶಾಸಕರು ಇವತ್ತು ಬಹಳ ಕಡಿಮೆ ಇಲ್ಲಿ ಕಾಣಿಸುತ್ತಿದ್ದಾರೆ. ಜನ ಅವರಿಗೆ ಪಾಠ ಕಲಿಸಿದ್ದಾರೆ. ಮುಂದುವರಿದು ನಾನು ಎವೆರ್ರಿ ಲೆಜಿಸ್ಲೇಟರ್ ಎಂದು ಹೇಳಲಿಲ್ಲ. ಬಹಳ ಮಟ್ಟಿಗೆ ಲೆಜಿಸ್ಲೇಟರ್ಸ್ ಇದನ್ನು ಒಂದು ಉದ್ಯೋಗ ಮಾಡಿಕೊಂಡಿದ್ದರು ಎಂದು ಇನ್ನೂ ಮುಂತಾಗಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇನ್ನು ಅಂದಿನ ಜನತಾ ಮತ್ತು ಜನತಾ ದಳದ ಸದಸ್ಯರ ಬಗ್ಗೆ ವ್ಯಕ್ತಮಾಡಿದ ಅಭಿಪ್ರಾಯ ಆ ಒಂದು ಉತ್ತರದ ಸಮಯದಲ್ಲಿ ಹೇಳಿದ್ದಾರೆ, ಅದು ಹಕ್ಕುಚ್ಯುತಿಯಾಗಿರುತ್ತದೆ. ಅಂಥ ಒಂದು ಆರೋಪದಿಂದ ಅದರ ಬಗ್ಗೆ ನನಗೆ ಪ್ರಸ್ತಾಪ ಮಾಡಲಿಕ್ಕೆ ಅವಕಾಶವನ್ನು ನೀಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಕೂಡಾ ನಿನ್ನೆ ದಿವಸ ನಾನು ಮತ್ತು ಏಕಾಂತಯ್ಯನವರು ಬರೆದಿರತಕ್ಕಂಥ ಪತ್ರವನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಈ ವಿಚಾರವನ್ನು ನಿನ್ನೆಯೇ ಪ್ರಸ್ತಾಪ ಮಾಡಿದೆ. ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. "ಲಕ್ಷಾವಧಿ ರೂಪಾಯಿ ಹಣವನ್ನು ಗಳಿಸಿ" ಎನ್ನತಕ್ಕಂಥ ಪದವೆನ್ನು ತಾವು ದಯವಿಟ್ಟು ಓದಬೇಕು. ಇಲ್ಲಿ ಜನತಾ ಮತ್ತು ಜನತಾದಳದ ಸದಸ್ಯರಾಗಿರತಕ್ಕಂಥವರು ಏನಾದರು ಗಳಿಸಿದ್ದರೆ ಅಲ್ಲಿ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ, ಎಲ್ಲ ಸದಸ್ಯರ ಬಗ್ಗೆ ಹೇಳುತ್ತಿಲ್ಲ ಎನ್ನತಕ್ಕಂಥ ಮಾತನ್ನು ಕೂಡಾ ಹೇಳಿದ್ದಾರೆ. ಅದನ್ನು ಒಪ್ಪಿಕೊಂಡರೂ ಸಹಾ ಗಳಿಸಿರತಕ್ಕಂಥವರು ಕೆಲವರು ಇದ್ದಾರೆ. ಇದು ಸಾರಾಸಗಟಾಗಿ ಎಲ್ಲರ ಮೇಲೆ ಕೂಡ ಹೇಳಿದ್ದರೂ, ಲಕ್ಷಾವಧಿ ರೂಪಾಯಿ ಗಳಿಸಿರತಕ್ಕವರು ಕೆಲವರಿದ್ದಾರೆ ಎನ್ನುವುದಾದರೆ ಇದರ ಬಗ್ಗೆ ಸರ್ಕಾರ ನಿರ್ದಿಷ್ಟವಾಗಿ ಅವರ ಹತ್ತಿರ ಏನಾದರೂ ದಾಖಲೆ ಇದ್ದರೆ ಹೇಳಲಿ. ಇಂತಹ ಸದಸ್ಯರು ಇಷ್ಟು ಲಕ್ಷ ರೂಪಾಯಿ ಮಾಡಿದ್ದಾರೆ ಎಂದು ಹೇಳಲಿ. ಇದರ ಬಗ್ಗೆ ವಿಚಾರಣೆಗೆ ನಾವು ಕೂಡ ತಯಾರು ಇದ್ದೇವೆ. ಅದು ಏನೂ ಇಲ್ಲದೇ ವೃಥಾ ಆರೋಪ ಮಾಡಿದ್ದಾರೆ. ಲಕ್ಷಾಂತರ ರೂಪಾಯಿ ಗಳಿಸಿ ಎಂಬ ಪದ ಸ್ಪೆಸಿಫಿಕ್ ಆಗಿದೆ; ಮತ್ತು ಕರಾರುವಕ್ಕಾದ ಪದ ಹೇಳಿದ್ದಾರೆ. ತಾವು ಯಾವ ಡಿಕ್ಷನರಿ ತರಿಸಿ ಬೇಕಾದರೂ ನೋಡಿದರೂ ಸಹ ಇದು ಎಷ್ಟು ಸ್ಪಷ್ಟವಾಗಿದೆ ಎನ್ನತಕ್ಕದ್ದು ಅರ್ಥ ಆಗುತ್ತದೆ. ಇದರಿಂದ ನಮ್ಮ ಹಕ್ಕುಚ್ಯುತಿ ಆಗಿದೆ. ನಾನು ಕೂಡ ಅಂದು ಒಬ್ಬ ಜನತಾ ಪಕ್ಷದ ಸದಸ್ಯನಾಗಿ ಇದ್ದೆ. ಇಂದಿಗೂ ಸಹ ಇದ್ದೇನೆ. ನನ್ನ ಕಾಲದ ಅವಧಿಯಲ್ಲಿ ನಾನು ನಾಲ್ಕನೇ